ವಾರದ ಮುಂಗಾರು

ಭಾನುವಾರ 19-3-1989

"ಕೈಗಾ" ಎನ್ನುವ ಶಬ್ದ ಕೇಳಿದೊಡನೆ ಆಳುವವರೂ, ಆಳಿಸಲ್ಪಡುವವರೂ ಒಟ್ಟಿಗೇ ಬೆಚ್ಚಿ ಬೀಳುವ ಸನ್ನಿವೇಶ ನಿರ್ಮಾಣವಾಗಿದೆ. ದಿನನಿತ್ಯದ ಬದುಕಿನ ಬುಡಕ್ಕೇ ಕೊಡಲಿಯೇಟು ಬೀಳುವ ಭಯ ನಾಗರಿಕರದ್ದಾದರೆ, ಜನಪರ ಚಳವಳಿಯ ಆವೇಗಕ್ಕೆ ತಮ್ಮ ಕುರ್ಚಿ ಉರುಳುವ ಭಯ ಅಧಿಕಾರಸ್ಥರದ್ದು. "ಕೈಗಾ" ದಲ್ಲಿ ಸ್ಥಾಪನೆ ನಡೆಸಲು ಉದ್ದೇಶಿಸಿರುವ ಅಣುಸ್ಥಾವರ ಜನರಲ್ಲಿ ಭಯದ ಅಲೆಗಳನ್ನೆಬ್ಬಿಸಿದೆ. ಈ ಭಯದ ಅಲೆಗಳು ದಬ್ಬಿಸಿದ ಚಳವಳಿಯ ಕಾವು ಈಗ ಬೆಂಗಳೂರಿನ ಅಧಿಕಾರಸ್ಥರ ತಲೆ ತಿನ್ನತೊಡಗಿದೆ. ಕೈಗಾದ ಸುತ್ತ ಹಳ್ಳಿ-ಹಳ್ಳಿಗಳಲ್ಲಿ ಚಿಗಿ ಹುಟ್ಟಿಸಿರುವ ಕೈಗಾ ವಿರೋಧಿ ಚಳವಳಿಯನ್ನು ಸಮೀಪದಿಂದ ಕಂಡು ಬರೆದ ಲೇಖನವಿದು.

ಕೈಗಾದ ಸುತ್ತಮುತ್ತ...

ಭಾಗೀರಥಿ ಹೆಗಡೆ

"ಅವಶ್ಯಕತೆಯೇ ಆವಿಷ್ಕಾರದ ತಾಯಿ" ಎಂಬುದೊಂದು ನಾಣ್ಣುಡಿ. ಆದರಿದು ಸಂಪೂರ್ಣ ಸತ್ಯವಲ್ಲ, ಸತ್ಯದ ಒಂದು ಮುಖ ಮಾತ್ರ. ಯಾಕೆಂದರೆ ಮಾನವೇತಿಹಾಸದ ಸುದೀರ್ಘ ಪಥದತ್ತ ಹೊರಳಿ ನೋಡಿದಾಗ ಆತ ತನಗೆ ಬೇಕಾದದ್ದು, ಬೇಡವಾದದ್ದು, ಅವಶ್ಯಕತೆ ಇದ್ದದ್ದು ಇಲ್ಲದ್ದು ಎಲ್ಲವನ್ನೂ ಕಂಡು ಹಿಡಿದಿದ್ದಾನೆ. ಅಂದರೆ ಯಾವುದನ್ನೋ ಹುಡುಕುತ್ತ ಇನ್ನಾವುದೋ ದೊರಕಿ ಅದರಿಂದೊದಗಬಹುದಾದಕ್ರಿಯಾತ್ಮಕಪ್ರಯೋಜನಗಳ ಸಾಧ್ಯತೆಗಳನ್ನು ತೋರಿಸಿದಾಗ, ಹಣವುಳ್ಳವರು ಆ ವನ ಶೋಧನೆಯನ್ನು ಖರೀದಿ ಮಾಡಿ ಸರಕುಗಳನ್ನು ಉತ್ಪಾದಿಸಿ ಅದನ್ನು ಜನಸಾಮಾನ್ಯರಿಗೆ- ಅದು ಅಗತ್ಯವಿರಲಿ, ಇಲ್ಲದಿರಲಿ, ಅನಿವಾರ್ಯವಾಗಿರಲಿ, ಬಿಡಲಿ- ಇದಂತೂ ಆಕರ್ಷಕ ಪ್ರಚಾರಗಳ ಮೂಲಕ-ತಲು ಪಿಸಿ ಶಿವನ್ನು ವಿಜಾನೆಯನ್ನು ಭರ್ತಿ ಮಾಡಿ ಕೊಳ್ಳುತ್ತಾರೆ. ಜನಸಾಮಾನ್ಯರು ವಸ್ತುಗಳ ದಾಸರಾಗಿ ಬಿಡುತ್ತಾರೆ. ಜಗತ್ತಿನ ಮನುಷ್ಯ ಸಂಖ್ಯೆಯ ಸಾವಿರಾರು ಪಟ್ಟು ಹೆಚ್ಚಿರಬಹುದಾದ ಯಂತ್ರಗಳ ಸಂತೆ ಯಲ್ಲಿ ಇಂದು ಮನುಷ್ಯ ಕಳೆದುಹೋಗಿದ್ದಾನೆ. ಆದರೆ ವಸ್ತುಗಳ ಉದ್ದೇಶದ್ದಾ ಉತ್ಪಾದನೆ ಮತ್ತು ಸ್ವೇಚ್ಛಾ ಬಳಕೆಯೇ ಮುಂದುವರಿಕೆಯ ಮತ್ತು ಸುಖದ ಅಳತೆಗೋಲೆ? ಹೌದೆನ್ನುವುದಾದರೆ ಇಂದಿನ ಮಾನವ ಸುಖಿಯಾಗಿದ್ದಾನೆಯೆ? ಬೆಂಕಿಯನ್ನು ಕಂಡರಿಯದ ಆದಿ ಮಾನವನಿಗೆ 'ಸುಖ ಇತ್ತೆ-ಇಲ್ಲವೆ?...ಹೀಗೆ ಚಿಂತಿಸಿದಾಗ 'ಅವಶ್ಯಕತೆ ಎಂಬುದಕ್ಕಿಂತ 'ಅನಿವಾರ್ಯತೆ' ಎಂಬ ಶಬ್ದ ಹೆಚ್ಚು ಅರ್ಥಪೂರ್ಣವಾಗುತ್ತದೆ.

ಇಂದು, ಇಪ್ಪತ್ತನೇ ಶತಮಾನದ [illegible] ವಾಯು ಮಾಲಿನ್ಯ-ಜಲ ಮಾಲಿನ್ಯ- ಸಾಗರ ಮಾಲಿನ್ಯಗಳು ಮೇರೆ ಮೀರುತ್ತಿವೆ. ವಾತಾವರಣದ ಉಷ್ಣತೆ ವೇಗವಾಗಿ ಹೆಚ್ಚುತ್ತಿದೆ. ಜೀವ ರಕ್ಷಕವಾದ ಓಝೋನ್ ಪದರ ಛಿದ್ರಗೊಳ್ಳುತ್ತಿದೆ. ಮಿತಿ ಮೀರಿದ ಅರಣ್ಯನಾಶ ಮತ್ತು ರಾಸಾಯನಿಕ ವಸ್ತುಗಳ ಸೇರ್ಪಡೆಯಿಂದಾಗಿ ಅನಾವೃಷ್ಟಿ-ಹುಳ ಮುಳಗಳಂಥ ಆನಿಷ್ಟಗಳು ಜಗತ್ತನ್ನು ಕಾಡುತ್ತಿವೆ. ಇಂಥ ಭೀಕರ ಸನ್ನಿವೇಶದ ಸೃಷ್ಟಿ ಅನಿವಾರ್ಯವಾಗಿತ್ತೆ? ಮನುಷ್ಯ ಕೊಂಚ ವಿವೇಚನೆಯಿಂದ ವರ್ತಿಸಿದ್ದರೆ ಬದುಕು ಕೆಲ ಮಟ್ಟಿಗಾದರೂ ಸಹನೀಯವೆನಿಸುತ್ತಿತ್ತಲ್ಲವೆ? ಅಥವಾ ಇಂಥ ದೌರ್ಬಲ್ಯವೇ ಅವನ ಮಿತಿ ಎನ್ನೋಣವೆ?

ಅದಿಲ್ಲವಾದರೆ ಕ್ಷಣಾರ್ಧದಲ್ಲಿ ಇಡೀ ಜಗತ್ತನ್ನೇ ಸುಟ್ಟು ಬೂದಿ ಮಾಡಬಲ್ಲ ಅಣ್ವಸ್ತ್ರಗಳು-ಜೀವವಿಧ್ವಂಸಕ ವಿಷಾನಿಲ ತನೆ ಸೃಷ್ಟಿಸಬಲ್ಲ ಕೈವಿಷಾಸ್ತ್ರ- ರಾಸಾಯನಿಕಾಸ್ತ್ರಗಳು- ಅವೆಲ್ಲ ಬೇಡ, ಶಾಂತಿಗಾಗಿ ಪರಮಾಣು ಶಕ್ತಿ ಎಂಬ ಘೋಷಣೆಯಡಿಯಲ್ಲಿ ಇಂತ ಅಣು ವಿದ್ಯುತ್ತನ್ನೇ ತೆಗೆದುಕೊಳ್ಳೋಣ. ಕಣ್ಣು ತಪ್ಪಿದರೆ ಮರಣ' ಎಂಬಷ್ಟು ಅಪಾಯಕಾರಿಯಾದ ಈ ಶೋಧನೆ ಮಾನವನಿಗೆ ಅಗತ್ಯವಾಗಿತ್ತೆ? ಅನಿವಾರ್ಯವಾಗಿತ್ತೆ? 'ಭವಿಷ್ಯದ ಶಕ್ತಿಮೂಲ ಪರಮಾಣು ಮಾತ್ರ ಎಂಬ ಮಾತು ಸತ್ಯವೆ?'

ಇಂಥ ಮಾತುಗಳೆಲ್ಲ ದೇಶ ವಿದೇಶದ ಸುದ್ದಿಯಾಗಿ ಓದಲು ಅಥವಾ ಚರ್ಚಿಸಲು ತುಂಬ ಅರ್ಥಪೂರ್ಣವಾದ ಸಂಗತಿಗಳು. ಆದರೆ ನಮ್ಮ ಕಾಲು ಬುಡದಲ್ಲಿ ನಮ್ಮದೇ ಜಿಲ್ಲೆಯಲ್ಲಿ ಅಣುವಿದ್ಯುತ್ ಸ್ಥಾವರ ನಿರ್ಮಾಣವಾಗುತ್ತಿದೆಯೆನ್ನುವಾಗ ಜನರು ಏನೆನ್ನಬೇಕು? ರಾಷ್ಟ್ರ ಹಿತಕ್ಕಾಗಿ ನಾವು ಮಹಾತ್ಯಾಗಿಗಳಾಗುತ್ತಿದ್ದೇವೆ ಎಂದು ಎದೆ ತಟ್ಟಿಕೊಳ್ಳೋಣವೆ? ಈ ಯೋಜನೆಯಿಂದ ಉದ್ಯೋಗಾವಕಾಶ ಹೆಚ್ಚಿ ಜಿಲ್ಲೆಯ ಪ್ರಗತಿಯಾಗುತ್ತದೆ ಎಂಬ ಬುರುಡೆಯನ್ನು ನಂಬಿಕೊಳ್ಳೋಣವೆ? ಅಥವಾ ಎಲ್ಲರಿಗೂ ಆದಂತೆ ನಮಗೂ ಆಗಲಿ ಎಂಬ ಔದಾಸ್ಯದಲ್ಲಿ ಗೋಣೆ ಹೊಡೆದೋಣವೆ?

ಉತ್ತರ ಕನ್ನಡ ಜಿಲ್ಲೆ-ರಾಜ್ಯದ ಎರಡೇ ಎರಡು ಕರಾವಳಿ ಜಿಲ್ಲೆಗಳಲ್ಲಿ ಒಂದಾದ ಕಾರವಾರ ಜಿಲ್ಲೆ. ಪಶ್ಚಿಮದಲ್ಲಿ ಉದ್ದಗಲಕ್ಕೂ ಹರಡಿರುವ ನೀಲ ಅರಬ್ಬೀ ಸಮುದ್ರ, ಅದರಿಂದ ಮೇಲೆದ್ದು ಸಹ್ಯ ಶೃಂಗಗಳು, ಅವುಗಳ ಮೈಮೇಲೆ ಲಕ್ಷಾಂತರ ವರ್ಷಗಳಿಂದ ತನ್ನ ಒಡಲಲ್ಲಿ ಸಸ್ಯ- ಜೀವರಾಶಿಗಳನ್ನಿಟ್ಟುಕೊಂಡು ಪೋಷಿಸುತ್ತ ಬಂದ ಘನ ಗಂಭೀರ ಕಾಡು ಅದನ್ನು ಕತ್ತರಿಸಿ ಬಂದರೆ ತೆಂಗು-ಅಡಿಕೆ-ಬಾಳೆ-ಭತ್ತ-ಕಬ್ಬು ಮುಂತಾದ ಬೆಳೆಗಳಿಗೆ ಆಶ್ರಯವಿತ್ತ ಫಲವತ್ತಾದ ನೆಲ. 'ಹಸಿರು' ಎಂಬ ಭಾವನೆಯನ್ನು ಬದಿಗಿರಿಸಿ ವಸ್ತುನಿಷ್ಠವಾಗಿ ಚಿಂತಿಸಿದಾಗಲೂ ಇಷ್ಟು ಸೀಮಿತ ಪರಿಧಿಯಲ್ಲಿ ದಿಗ್ಭ್ರಮೆ ಹುಟ್ಟಿಸುವಷ್ಟು ಯೋಜನೆಗಳು. ಉತ್ತರದಲ್ಲಿ ಕಾಳಿ ಜಲ ವಿದ್ಯುತ್ ಯೋಜನೆಯ ವಿವಿಧ ಬೃಹತ್ ಜಲಾಶಯಗಳು, ಪಶ್ಚಿಮದಲ್ಲಿ ನೌಕಾನೆಲೆ, ದಕ್ಷಿಣದಲ್ಲಿ ಶರಾವತಿ ಟೇಲ್‌ರೇಸ್, ಬೇಡ್ತಿ- ಅಘನಾಶಿನಿ- ವಿದ್ಯುತ್ ಯೋಜನೆಗಳು-ಜೊತೆಗೆ ಕಾರವಾರದ ಸಮೀಪವೇ ಕೈಗಾಯೋಜನೆ ಇವೆಲ್ಲ ನಿರ್ಮಾಣವಾಗುತ್ತಿರುವ-ಆದರೆ, ಇನ್ನೂ ಕೆಲವು ಕಾಗದದಲ್ಲಿರುವ ಅಭಿವೃದ್ಧಿ ಯೋಜನೆಗಳು. ಅದರಲ್ಲಿ ಬೇಡ್ತಿಯೊಂದು ಜನಾಭಿಪ್ರಾಯಕ್ಕೆ ಮಣಿದು ಸದ್ಯಕ್ಕೆ ಸ್ಥಗಿತಗೊಂಡಿದೆ.ಆದೇನೊ ಧರ್ಮ ಕರ್ಮ ಸಂಯೋಗ ಎಂಬಂತೆ ಈ ಜಿಲ್ಲೆಯು ಹಲವೇ ಬೇಕೆ? ವಿದ್ಯುತ್ತಿಗೆ ಬೃಹತ್ ನದಿಗಳೆಲ್ಲ ಪಶ್ಚಿಮ ಘಟ್ಟದಲ್ಲಿ ಧುಮುಕುತ್ತಾ, ಜಲ ವಿದ್ಯುತ್ ಯೋಜನೆಗಳಿಗೆ ಅನುಕೂಲವಾಗಿವೆ; ಸರಿ ಒಪ್ಪಿಕೊಳ್ಳೋಣ ಆದರೆ ಅಣು ವಿದ್ಯುತ್ತಿಗೂ ಈ ಜಿಲ್ಲೆಯು ಪ್ರಮಾಣದ ಬೇಡಿಕೆ ಇರುವಲ್ಲಿಯೇ ಸ್ಥಾವರ ಸ್ಥಾಪಿಸಿಕೊಂಡರೆ ಸಾಗಾಣಿಕೆಯ ವೆಚ್ಚವಾದರೂ ತಗ್ಗುತ್ತದಲ್ಲ. ಇವಿಷ್ಟೂ ಯೋಜನೆಗಳು ಕಾರ್ಯಗತಗೊಂಡರೆ ಜಿಲ್ಲೆಯ ನೆಲ ಯಾವ ಪ್ರಮಾಣದಲ್ಲಿ ಉಳಿದೀತು? ಇವುಗಳಿಂದುಂಟಾಗುವ ನೈಸರ್ಗಿಕ ವೈಪರೀತ್ಯಕ್ಕೆ ಯಾರು ಹೊಣೆಯಾಗುತ್ತಾರೆ?

ಅನುಕೂಲ ಬೇಕೆಂದಾಗ ಕೆಲ ಮಟ್ಟಿಗಿನ ಅಪಾಯಗಳನ್ನೂ ಎದುರಿಸಲೇ ಬೇಕಾಗುತ್ತದೆ ಎಂಬ ಸರ್ವಸಮ್ಮತವಾದವನ್ನು ಒಪ್ಪಿಕೊಂಡು ಬಿಡುವಷ್ಟು ಸರಳವಾಗಿದೆಯೆ ಅಣುಶಕ್ತಿಯ ಅಪಾಯಗಳು? ನಲವತ್ತರ ದಶಕದಿಂದ ಬೆಳವಣಿಗೆಯಾಗುತ್ತ ಬಂದ ಪರಮಾಣು ಶಕ್ತಿಯ ಉಪಯೋಗ ಇಂದು ಅತ್ಯಂತ ಅಪಾಯಕಾರಿ ಎಂಬ ತೀರ್ಮಾನದೊಂದಿಗೆ ಅದರ ಜನ್ಮಸ್ಥಳದಲ್ಲೇ ಬಹಿಷ್ಕೃತವಾಗುತ್ತಿರುವಾಗ, ನಮಗೆ ಅದೇ ವರವಾಗುವುದು ಎಂಬ ಹಟ ಯಾಕೆ? ಅಣುಸ್ಥಾವರಗಳು ಹೊರಸೂಸುವ ವಿಕಿರಣ ಶೀಲ ವಸ್ತುಗಳು ಜೀವಿಗಳಲ್ಲಿ ಕ್ಯಾನ್ಸರ್‌ನಂಥ ರೋಗಕ್ಕೆ, ವಂಶವಾಹಿಗಳ ಏರುಪೇರಿಗೆ, ತನ್ಮೂಲಕ ಅಂಗವಿಕಲ ಸಂತತಿಯ ಜನನಕ್ಕೆ ಕಾರಣವಾಗುತ್ತದೆಂದು ವಿಜ್ಞಾನಿಗಳೇ ಒಪ್ಪುತ್ತಿರುವಾಗ, ನಮ್ಮ ದೇಶದ ಭ್ರಷ್ಟ ವ್ಯವಸ್ಥೆಯ ಸಮ್ಮುಖದಲ್ಲಿ ಅಪರಿಮಿತ ತಾಂತ್ರಿಕತೆಯ ವಾಸ್ತವದಲ್ಲಿ ಈ ಅಣುಸ್ಥಾವರವನ್ನು ಒಪ್ಪಿಕೊಳ್ಳುವ ಧೈರ್ಯ ಯಾರಿಗೂ ಇಲ್ಲ. ಯಾರೆಷ್ಟೇ ಸುರಕ್ಷಿತತೆಯ ಮಾತಾಡಲಿ, ಭದ್ರತಾವ್ಯವಸ್ಥೆಯ ಬಗ್ಗೆ ಪ್ರಮಾಣ ಮಾಡಲಿ, ನಮ್ಮ ನಲವತ್ತು ವರ್ಷಗಳ ಪ್ರಜಾಪ್ರಭುತ್ವವನ್ನು ಕಂಡುಂಡವರು ಅದನ್ನು ನಂಬಲಿಕ್ಕೇ ಸಾಧ್ಯವಿಲ್ಲ. ತ್ರೀ ಮೈಲ್ ಐಲೆಂಡ್,ಚೆರ್ನೋಬೈಲ್ ಮುಂತಾದ ದುರಂತಗಳ ಭೀಕರ ಪರಿಣಾಮ ಕಣ್ಣೆದುರಿನಲ್ಲೇ ನಿಂತಿರುವಾಗ ನಮಗೆ ಅಭಿವೃದ್ಧಿ ಬೇಕೆಂಬ ಕಾರಣಕ್ಕಾಗಿ ಭಯಾನಕ ಭವಿಷ್ಯವನ್ನು ಮೈಮೇಲೆಳೆದುಕೊಳ್ಳುವುದು ಸಾಧುವೂ ಅಲ್ಲ, ಸ್ವಲ್ಪವಾದರೂ ವೈಚಾರಿಕ ಶಕ್ತಿ ಇರುವವರಿಗೆ ಈ ವಿಷಯದಲ್ಲಿ ಸುಮ್ಮನಿದ್ದು ಬಿಡುವುದು ಸಾಧ್ಯವೂ ಇಲ್ಲ.

ಇಂಥ ಒಂದು ವೈಚಾರಿಕ ಹಿನ್ನೆಲೆಯಲ್ಲಿ ಉತ್ತರ ಕನ್ನಡದ ಜನರು ಕೈಗಾ ವಿರೋಧಿ ಆಂದೋಲನಕ್ಕಿಳಿಯುವುದು ಅನಿವಾರ್ಯವಾಗಿತ್ತು. ಒಂದು ಸಂಘಟಿತ ಹೋರಾಟದ ಅವಶ್ಯಕತೆ ತೀವ್ರವಾಗಿ ಇತ್ತು.

ಇಲ್ಲಿ ಒಂದು ಮಾತನ್ನು ಸ್ಪಷ್ಟಗೊಳಿಸಬೇಕು. ಯಾವುದೇ ಜನಪರ ಹೋರಾಟವೆಂದಾಗ ಕೇವಲ ವಿರೋಧಿಸುವುದಕ್ಕಾಗಿ ವಿರೋಧ ಆಗಿರದೆ ಜನ ಸಾಮಾನ್ಯರ-ಬಹು ಜನರ ಮೂಲಭೂತ ಹಿತಾಸಕ್ತಿಗಾಗಿ, ಉಳಿವಿಗಾಗಿ-ಯಾವುದೇ ರಾಜಕೀಯ ಸ್ಪರ್ಶವಿಲ್ಲದೆ ಜನರು ಜನರಿಗಾಗಿ ಹೋರಾಡಿದಾಗ ಮಾತ್ರ ಅರ್ಥಪೂರ್ಣವಾಗುತ್ತದೆ ಮತ್ತು ತನ್ನ ಸಾರ್ಥಕ್ಯ ಕಂಡುಕೊಳ್ಳುತ್ತದೆ, ಈ ಹೋರಾಟ ಸಮಗ್ರ ರಾಷ್ಟ್ರದ ಹಿತಕ್ಕೆ ಮಾರಕವಾಗ ಬೇಕಿಲ್ಲ ಮತ್ತು ಆಗಲೂ ಕೂಡದು.ಗಣತಂತ್ರೀಯ ಆಡಳಿತ ಪದ್ಧತಿಯಲ್ಲಿ ಮೂಲಭೂತ ಹಕ್ಕುಗಳಿರುವಂತೆಯೇ ಪೌರನಾಗಿ ಅಷ್ಟೇ ಪ್ರಮಾಣದ ಕರ್ತವ್ಯಗಳೂ ಇವೆ, ಒಪ್ಪಿಕೊಳ್ಳಲೇಬೇಕು. ಒಂದು /ಒಕ್ಕೂಟ ರಾಷ್ಟ್ರದಲ್ಲಿ ಪ್ರಾಂತೀಯ ಭಾವನೆ ಎಂದಿಗೂ ಸರಿಯಲ್ಲ. ಆದರೆ ಅದೇ ವೇಳೆಗೆ ನಮ್ಮ ನಮ್ಮ ಊರುಕೇರಿ ತಾಲೂಕು-ಜಿಲ್ಲೆಗಳ ಹಿತರಕ್ಷಣೆ ನಮ್ಮ ಆದ್ಯ ಕರ್ತವ್ಯವಾಗಿದೆ ಎನ್ನುವುದನ್ನು ಮರೆಯುವಂತಿಲ್ಲ. ಏರಿವ ಪ್ರತಿಯೊಂದು ಅಣುವೂ ತನ್ನದಾದ ಅಸ್ತಿತ್ವವನ್ನುಳಿಸಿಕೊಂಡೇ ಅಖಂಡ ಜಲರಾಶಿಯಾಗಿರುವಂತೆಯೇ ಒಂದು ದೇಶ-ಜನಾಂಗಗಳ ನಡುವೆ ವ್ಯಕ್ತಿಗತ ಇರುವಿಕೆಯಾಗಿದೆ.

ಚಿತ್ರಗಳು: ಶ್ರೀ ರಾಜ್ ಶಿರಸಿ

88 ರ ಅಕ್ಟೋಬರ್: ಕಾರವಾರದಲ್ಲಿ ಅಣುವಿರೋಧಿ ಬೀದಿ ನಾಟಕ.

ಹೀಗೆ ಹಿತರಕ್ಷಣೆಯ ಪ್ರಶ್ನೆ ಬಂದಾಗ ಕೆಲವು ವಾದಗಳು ಎದುರಾಗುತ್ತಿವೆ. ಭಾರತದಲ್ಲಿ ಅಂತರಾಷ್ಟ್ರೀಯ ಮಟ್ಟದ ವಿಜ್ಞಾನಿಗಳಿದ್ದಾರೆ. ಅವರು ಅಣುಶಕ್ತಿ ಕೇಂದ್ರವನ್ನು ಸ್ಥಾಪಿಸಿ ಸಮರ್ಪಕವಾಗಿ ನಿರ್ವಹಿಸುವ ಸಾಮರ್ಥ್ಯ ಹೊಂದಿದ್ದಾರೆ. 'ಅಣುದುರಂತ ಆದರೆ ಅಪಾಯ ಎಂದ ಮಾತ್ರಕ್ಕೆ ಸ್ಥಾವರದ ನಿರ್ಮಾಣವನ್ನೇ ವಿರೋಧಿಸುವುದು ಮೂರ್ಖತನವೇ ಸರಿ'-'ಎಂದೋ ಬರಬಹುದಾದ ಸಾವಿಗೆ ಹೆದರಿ ಇಂದು ದಾರಿದ್ರ್ಯ ಅನುಭವಿಸುವುದು ಸರಿಯಲ್ಲ.'-'ಅಪಾಯವಾಗದಂತೆ ಸಾಕಷ್ಟು ಭದ್ರವಾಗಿಯೇ ಸ್ಥಾವರ ಕಟ್ಟುತ್ತೇವೆ'-ಇತ್ಯಾದಿ ಇತ್ಯಾದಿಯಾಗಿ ನಮ್ಮ ಮಂತ್ರಿ ಮಹೋದಯರುಗಳು, ಸರ್ಕಾರಿ ವಿಜ್ಞಾನಿಗಳು, ಅಣುಶಕ್ತಿ ಪರ ನಿಂತ ಕೆಲವೇ ಜನರೂ ನುಡಿ ಮುತ್ತು ಉದುರಿಸುತ್ತಿದ್ದಾರೆ.

ಆದರೆ ಉತ್ತರ ಕನ್ನಡದ ಶ್ರೀಸಾಮಾನ್ಯ ಎಂದೂ ಕೋಲೆ ಬಸವನಲ್ಲ. ಪ್ರತಿಯೊಂದು ಮಾತು ಮತ್ತು ಕೃತಿಗಳನ್ನು ತೂಗಿ ನೋಡುವ ವಿವೇಚನಾ ಶಕ್ತಿ ಅವನಲ್ಲಿದೆ. ಸ್ವಾತಂತ್ರ್ಯ ಚಳವಳಿಯ ಕಾಲದಿಂದಲೂ ಈ ಜಿಲ್ಲೆ ಜಾಗೃತವಾಗಿಯೇ ಇದೆ. 1985ರಲ್ಲಿ ಕೈಗಾ ಅಣು ವಿದ್ಯುತ್ಕೇಂದ್ರಕ್ಕೆ ಕೇಂದ್ರದ ಒಪ್ಪಿಗೆ ದೊರೆತಿದೆ ಎಂಬ ಸುದ್ದಿ ಪ್ರಕಟವಾದಂದಿನಿಂದಲೂ ಭಾಷಣ-ಲೇಖನ-ಸೆಮಿನಾರ್-ಬೀದಿ ನಾಟಕಗಳ ಮೂಲಕ ಇದಕ್ಕೆ ವಿರೋಧವನ್ನೂ ವ್ಯಕ್ತಪಡಿಸುತ್ತಲೇ ಇದ್ದರು.

ಕಾರವಾರದ ಅಣುಶಕ್ತಿ ಕಚೇರಿಯ ಮುಖ್ಯಸ್ಥ ತಿವಾರಿ ಜತೆ ಪೇಜಾವರ ಸ್ವಾಮಿಯವರ ಚರ್ಚೆ.

ಆದರೆ ಈ ವಿರೋಧಕ್ಕೊಂದು ಸ್ಪಷ್ಟ ರೂಪ ಸಿಕ್ಕಿದ್ದು ಮಾತ್ರ 88ರ ಸೆಪ್ಟಂಬರ್‌ದಿಂದ ಅಗಸ್ಟ್ 28ಕ್ಕೆ ಶಿರಸಿಯ ಶ್ರೀಮಾರಿಕಾಂಬಾ ದೇವಾಲಯದ ಮಹಿಳಾ ಸಪ್ತಾಹದಲ್ಲಿ ಮಾತಾಡಲು ಬಂದ ಡಾ। ಕುಸುಮಾ ಸೊರಬರವರು-"ಒಂದು ನೂರು ಜನ ಸ್ತ್ರೀಯರು ನನ್ನ ಜೊತೆ ಬಂದರೆ ನಾನು ಕೈಗಾ ಕೆಲಸವನ್ನು ನಿಲ್ಲಿಸಿಯೇ ನಿಲ್ಲಿಸುತ್ತೇನೆ" ಎಂದು ಘೋಷಿಸಿದ್ದೇ ಮೂಲ ಪ್ರೇರಣೆಯಾಗಿ ಈ ಚಳವಳಿಯೇ ಪ್ರಾರಂಭವಾಯಿತು. ನೂರಲ್ಲ, ಸಾವಿರಾರು ಮಂದಿ ಮಹಿಳೆಯರು ಅಂದಿನಿಂದ ಇಂದಿನ ತನಕ ಈ ಆಂದೋಲನದಲ್ಲಿ ಪಾಲ್ಗೊಂಡಿದ್ದಾರೆ ಹಾದು ಹೋಗಿದ್ದಾರೆ-ಕೆಲವು ಮಹಿಳೆಯರು 'ಕೈಗಾ ಸ್ಥಾವರ ನಿಲ್ಲಿಸಿಯೇ ವಿಶ್ರಾಂತಿ' ಎಂಬಂತೆ ಅಚಲರಾಗಿ ಹೋರಾಟದ ಮುಂಚೂಣಿಯಲ್ಲಿದ್ದಾರೆ. ಚಳವಳಿಯ ಪ್ರತಿಯೊಂದು ಹಂತದಲ್ಲಿಯೂ ಪುರುಷರೊಂದಿಗೆ ಸರಿಸಮಾನ ಹೆಜ್ಜೆ ಹಾಕಿದ್ದಾರೆ. ಇದು ನಮ್ಮ ಭಾರತೀಯ ಸಂದರ್ಭದಲ್ಲಿ ಸಾಕಷ್ಟು ಮಹತ್ವದ ಸಂಗತಿ.

ಕೈಗಾ ವಿರೋಧಿ ಚಳವಳಿಯ ನಾಂದಿಯಾಗಿ 1988ರ ಸೆ, 23ರಂದು ತಾಲೂಕು ಕೇಂದ್ರಗಳಲ್ಲಿ ಮೆರವಣಿಗೆ-ಮನವಿ ಅರ್ಪಣೆಗಳು ನಡೆದವು ಶಿರಸಿಯಲ್ಲಿ ಸಾವಿರಾರು ಜನ ಹಳ್ಳಿಹಳ್ಳಿಗಳಿಂದ ಬಂದ ಹೆಂಗಸರು-ರಪರಪರಾಚುತ್ತಿರುವ ಮಳೆಯನ್ನು ಲೆಕ್ಕಿಸದೆ ಶಿಸ್ತಿನಿಂದ ನಡೆದರು. ಎ.ಸಿ.ಯವರು ಅತ್ಯಂತ ಸೌಜನ್ಯದಿಂದ ಮನವಿ ಸ್ವೀಕರಿಸಿ ಸರ್ಕಾರಕ್ಕೆ ಇವುಗಳನ್ನೆಲ್ಲ ಕಳಿಸುತ್ತೇನೆಂದು ಹೇಳಿದಾಗ ಚಳವಳಿಗಾರರಲ್ಲಿ ಸಾಕಷ್ಟು ಆತ್ಮವಿಶ್ವಾಸ ಕುದುರಿತ್ತು. ಹಲವಾರು ಸಂಘ ಸಂಸ್ಥೆಗಳು-ಪತ್ರಕರ್ತರು ಪ್ರತಿಷ್ಠಾವಂತ ನಾಗರಿಕರು-ಇವರೆಲ್ಲರ ಬೆಂಬಲ ಚಳವಳಿಯ ಬೆನ್ನೆಲುಬಾಗಿತ್ತು.

ಗಾಂಧಿ ಜಯಂತಿಯ ದಿನ ಕಾರವಾರದಲ್ಲಿ ಸುಮಾರು ಎರಡೂವರೆ ಸಾವಿರ ಜನರು ಒಟ್ಟಾಗಿ ಮೆರವಣಿಗೆ ಹೊರಟು ಘೋಷಣೆಗಳಿಂದ ಕಾರವಾರದ ಬೀದಿ ಬೀದಿಗಳನ್ನೂ ಎಚ್ಚರಿಸಿದರು. ನಂತರ ಸಭೆ ಸೇರಿ ಅಣುಶಕ್ತಿ ವಿರೋಧಿಸಿ ನಿರ್ಣಯ ಪಾಸುಮಾಡಿದರು. ಆದರೆ ಈ ಸಂದರ್ಭದಲ್ಲಿ ಕಾರವಾರದ ಜನರೇ ಎದ್ದು ಬಂದಿರಲಿಲ್ಲ. ಅವರು ಅತ್ಯಲ್ಪ ಸಂಖ್ಯೆಯಲ್ಲಿದ್ದರು ಎಂಬುದು ಕೂಡ ನಮ್ಮ ಸಾಮಾಜಿಕ ಬದುಕಿನ ಹಲವು ವಿಪರ್ಯಾಸಗಳಲ್ಲಿ ಒಂದು ಎಂದೇ ಹೇಳಬೇಕಾಗುತ್ತದೆ. ಮರುದಿನ ಪೇಜಾವರ ಸ್ವಾಮಿಗಳ ನೇತೃತ್ವದಲ್ಲಿ ಎನ್. ಪಿ. ಸಿ. ಆಫೀಸಿಗೆ ಮುನ್ನೂರಕ್ಕೂ ಹೆಚ್ಚು ಜನರು ಮುತ್ತಿಗೆ ಹಾಕಿದಾಗ ಅವರೆಲ್ಲರನ್ನೂ (ಸ್ವಾಮಿಗಳೂ ಒಳಗೊಂಡಂತೆ) ಬಂಧಿಸಿ ಬಿಡುಗಡೆ ಮಾಡಿದಾಗ ಚಳವಳಿಯ ಒಂದು ಹಂತ ಮುಗಿದಂತಾಗಿತ್ತು.

ಅಕ್ಟೋಬರ್ 7 ರಂದು ಶಿರಸಿಯಲ್ಲಿ ಜಿಲ್ಲೆಯ ಸಂಸತ್ ಸದಸ್ಯರಾದ ದೇವರಾಯ ನಾಯ್ಕರ ಮನೆಗೆ ನೂರಾರು ಮಹಿಳೆಯರು ಮುತ್ತಿಗೆ ಹಾಕಿ ಕೈಗಾ ಕುರಿತಂತೆ ಅವರ ಅಭಿಪ್ರಾಯ ತಿಳಿಸುವಂತೆ ಒತ್ತಾಯಿಸಿದಾಗ ಅವರು ಪಕ್ಕಾ ರಾಜಕಾರಣಿಯ ಶೈಲಿಯಲ್ಲಿ ನುಣುಚಿಕೊಂಡರು. ನಂತರ ಈ ಕುರಿತಾ ಎಂ. ಪಿ.ಯವರ ಪತ್ರ (ಸ್ಥಳೀಯ ಪತ್ರಿಕೆಗಳಲ್ಲಿ) ಚಳವಳಿಗಾರರ ಉತ್ತರ ಹೀಗೆ ಕೊಂಚ ಹಗರಣ ನಡೆಯಿತು.

ನವೆಂಬರ್ 2 ರಂದು ಜಿಲ್ಲೆಯಾದ್ಯಂತ ಕೈಗಾ ವಿರೋಧಿಸಿ ರಾಸ್ತಾರೋಕೋ ಚಳವಳಿ ಅತ್ಯಂತ ಯಶಸ್ವಿಯಾಗಿ ನಡೆಯಿತು. ಸಾವಿರಾರು ಜನರ ಬಂಧನ ಬಿಡುಗಡೆ ಆಯಿತು. ಇಲ್ಲಿ ಹಲವು ಪ್ರಯಾಣಿಕರಿಗೆ ಡ್ರೈವರ್ ಕಂಡಕ್ಟರ್‌ಗಳಿಗೆ ಸಾಕಷ್ಟು ತೊಂದರೆಯಾಯಿತೆನ್ನದೆ ವಿಧಿಯಿಲ್ಲ. ಆದರೆ 'ಕೈಗಾಬಿಸಿ'ಯನ್ನು ಎಲ್ಲರಿಗೂ ಮುಟ್ಟಿಸುವಾಗ ಈ ಕ್ರಮ ಅನಿವಾರ್ಯವಾಗಿತ್ತು.

ಡಿಸೆಂಬರ್ 9-10 ರಂದು ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಕಾರ್ಯಾಗಾರಕ್ಕೆ ಶೇಷ ಪಾರ್ಟಿಗಳ ಸದ್ದಿನಿಂದಲೇ ಕಚೇರಿ ಕೆಲಸ ನಿಲ್ಲಿಸಿ ಕೈಗಾ ಕೆಲಸ ತಡೆಗೆ ಪೂರ್ವ ಪೀಠಿಕೆ ಹಾಡಲಾಗಿತ್ತು. ಎರಡೂ ದಿನ ಯಥಾಪ್ರಕಾರ ಬಂಧನ ಬಿಡುಗಡೆ ನಡೆದವು.

ಮುಂದೆ ಜನವರಿ 30-31 ಮತ್ತು ಫೆಬ್ರವರಿ 1, ಹೀಗೆ ಮೂರು ದಿನದ ಕಾರ್ಯಕ್ರಮದ ಉದ್ದೇಶ ಹೊಂದಿದ ನೇರ ಹೋರಾಟ ಮತ್ತು ನಾಲ್ಕು ದಿನ ಮುಂದುವರಿದದ್ದು ಅತ್ಯಂತ ಕುತೂಹಲಕಾರಿ ಕತೆಯಾಗಿದೆ. 30 ರಂದು ಸತ್ಯಾಗ್ರಹಿಗಳ ನಿರೀಕ್ಷೆಯ ಕಾಲು ಭಾಗದಷ್ಟೂ ಜನ ಸೇರಿರಲಿಲ್ಲ. ಸೇರಿದವರೂ ಕೂಟಯೋಧರಂತೆ ಚದುರಿ ಹೋಗಿದ್ದರು. ಬೇರೆ ಬೇರೆ ಗುಂಪುಗಳಲ್ಲಿ ಕೈಗಾ ಸ್ಥಾವರ ಪ್ರದೇಶಕ್ಕೆ ಒಳನುಗ್ಗಲು ಯತ್ನಿಸಿ

88 ರ ಫೆಬ್ರವರಿ: ಕುಮಟಾದಲ್ಲಿ ಸಾರ್ವಜನಿಕ ಸಭೆ.

ಜಿಲ್ಲೆಯಿಂದ ನೂರಾರು ಪರಿಸರಾಸಕ್ತರು (ಮಹಿಳೆಯರೂ ಸೇರಿದಂತೆ) ಹೋಗಿ ಪಾಲ್ಗೊಂಡು ವಿಜ್ಞಾನಿಗಳ ಭಾಷಣ ಆಲಿಸಿ, ತಮ್ಮ ಕೆಲವು ಅನುಮಾನಗಳನ್ನು ಅವರ ಮುಂದಿಟ್ಟಾಗ ಅದಕ್ಕೆ ಸಮರ್ಪಕ ಉತ್ತರ ಸಿಗದೆ ಕಾರ್ಯಾಗಾರದ ಹೊರಗೆ ತಮ್ಮದೇ ಒಂದು ಸಭೆ ನಡೆಸಿ ಬಂದರು. ಜನ ಮನದ ಭಯಾಶಂಕೆಗಳನ್ನು ನಿವಾರಿಸುವ ಸಲುವಾಗಿ ಏರ್ಪಾಡಾದ ಕಾರ್ಯಾಗಾರ ತನ್ನ ಉದ್ದೇಶದ ಹೊರ ಅಂಚನ್ನೂ ತಲುಪುವಲ್ಲಿ ವಿಫಲವಾಗಿದ್ದುದು ಸ್ಪಷ್ಟವಾಗಿತ್ತು.

'89ರ ಜನವರಿ 16-17 ರಂದು ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿ ಕಚೇರಿಗಳ ಪಿಕೆಟಿಂಗ್ ಕಾರ್ಯಕ್ರಮ. ಕೇವಲ ಬಂಧನಕ್ಕೊಳಗಾಗಿದ್ದರು. ಆದರೆ ಶಿರಸಿ-ಯಲ್ಲಾಪುರದಿಂದ ಬಂದ ಒಂದು ಗುಂಪು ಪ್ರತಿಷ್ಠಿತ ಅಣು ಸ್ಥಾವರದ ಕೆಲಸವನ್ನು ಎರಡು ತಾಸುಗಳ ಕಾಲ ತಡೆದು ನಿಲ್ಲಿಸುವಲ್ಲಿ ಯಶಸ್ವಿಯಾದದ್ದು ಅತ್ಯಂತ ಮಹತ್ವದ ಸಂಗತಿ.

ಅದಕ್ಕೆ ಮುನ್ನ ಚಳವಳಿಗಾರರು ಹತ್ತು ಕಿ. ಮೀ. ದೂರ ನಡೆದು ಗೋಡೆಯಂಥ ಘಟ್ಟ ಇಳಿದು ಹೆಜ್ಜೆ ಕಿತ್ತಿಡಲಾರದಷ್ಟು ಹೈರಾಣಾಗಿ ಹೋಗಿದ್ದರು. ಆದರೆ ಎಲ್ಲರಲ್ಲೂ ಚೈತನ್ಯ ತುಂಬಿದವರು ಡಾ। ಕುಸುಮಕ್ಕ. ಹೆಜ್ಜೆ ಹೆಜ್ಜೆಗೂ ಪೊಲೀಸರಿಂದ ಬಂದ ಅಡೆ ತಡೆಗಳನ್ನು

(ಹನ್ನೊಂದನೆ ಪುಟಕ್ಕೆ)

7-10-88 ರಂದು ಶಿರಸಿಯಲ್ಲಿ ಸಂಸತ್ ಸದಸ್ಯರ ಮನೆಗೆ ಮಹಿಳೆಯರ ಮುತ್ತಿಗೆ.

ಮಕ್ಕಳ ತೋಟ



ಬಲಿಷ್ಠ ಸಿಂಹ ಮತ್ತು ಚೆಲುವಿನ ಜಿಂಕೆ

ಒಂದು ಕಾಡಿನ ಸಿಂಹವು ಎಂದಿನಂತೆ ಬೇಟೆಯನ್ನರಸುತ್ತಾ ಹೊರಟಿತು. ಬಹಳ ದೂರ ಹೋದಾಗ ಸುಂದರವಾದ ಜಿಂಕೆಯೊಂದನ್ನು ಕಂಡು ಅದಕ್ಕೆ ತುಂಬಾ ಸಂತೋಷವಾಯಿತು. ಒಂದೇ ನೆಗೆತಕ್ಕೆ ಜಿಂಕೆ ಇದ್ದಲ್ಲಿಗೆ ನೆಗೆದುಕೊಂಡು ತಿನ್ನಬೇಕೆನ್ನುವಷ್ಟರಲ್ಲಿ ಅದರ ಸುಂದರವಾದ ರೂಪವು ಸಿಂಹದ ಮನಸ್ಸನ್ನು ತಡೆಯಿತು. ಅದು ಜಿಂಕೆಯನ್ನು ಕುರಿತು 'ಎಲೈ ಸುಂದರವಾದ ಜಿಂಕೆಯೇ, ನಿನ್ನ ರೂಪವು ನನ್ನನ್ನು ಸೆರೆಹಿಡಿದಿದೆ. ನೀನು ನನ್ನನ್ನು ಮದುವೆಯಾಗುವೆಯಾ?' ಎಂದು ಕೇಳಿತು. ಜಿಂಕೆಯು ಪ್ರಾಣಭಯದಿಂದ ಮದುವೆಯಾಗಲು ಒಪ್ಪಿತು. ಸಿಂಹವು ಅದನ್ನು ಗುಹೆಗೆ ಕರೆದುಕೊಂಡು ಹೋಗಿ ಪರಿಪರಿಯಾಗಿ ಉಪಚರಿಸಿತು. ಅದಕ್ಕೆ ಬೇಕಾಗುವ ಹುಲ್ಲು, ಸೊಪ್ಪುಗಳನ್ನು ತರಲು ಒಂದು ತೋಳವನ್ನು ನೇಮಿಸಿತು. ಸಿಂಹದ ಎದುರು ಮುಗುಳ್ನಗುತ್ತಾ ಇರುವ ಜಿಂಕೆಯು ಸಿಂಹ ಹೋದ ತಕ್ಷಣ ತನ್ನ ದುರ್ಗತಿಯನ್ನು ನೆನೆದು ಕಣ್ಣೀರು ಸುರಿಸುತ್ತಿತ್ತು. ದುಃಖಪೂರಿತವಾದ ಹಾಡುಗಳನ್ನು ಹಾಡುತ್ತಿತ್ತು, ಆದರೆ ಅದಕ್ಕೆ ತಪ್ಪಿಸಿಕೊಂಡು ಓಡಿಹೋಗಲು ಸಾಧ್ಯವಾಗುತ್ತಿರಲಿಲ್ಲ. ಯಾಕೆಂದರೆ ಅದರ ಕೆಲಸಕ್ಕೆಂದು ನೇಮಿಸಿದ ತೋಳದ ಬಲವಾದ ಕಾವಲಿತ್ತು.

ಒಂದುದಿನ ಜಿಂಕೆಯು ದುಃಖದಲ್ಲಿ ತನ್ನ ದುಃಸ್ಥಿತಿಯ ಬಗ್ಗೆ ಹಾಡುವುದನ್ನು ಸಿಂಹವು ಕೇಳಿಸಿಕೊಂಡಿತು. ತನ್ನೆದುರು ಸಂತೋಷದಿಂದಿರುವಂತೆ ನಟಿಸಿ ಹಿಂದಿನಿಂದ ದುಃಖ ಅನುಭವಿಸುತ್ತಿರುವ ಜಿಂಕೆಯ ಬಗ್ಗೆ ಕೋಪಗೊಂಡಿತು. ಅದು ಜಿಂಕೆಯನ್ನು ಹತ್ತಿರ ಕರೆದು 'ನಿನಗೆ ನನ್ನ ಮೇಲೆ ಇಷ್ಟವಿದ್ದಲ್ಲಿ ಮಾತ್ರ ಇಲ್ಲಿರಬೇಕು ಇಲ್ಲವಾದರೆ ನೀನು ಧಾರಾಳವಾಗಿ ಹೊರಟು ಹೋಗಬಹುದು. ರಾಣಿಯಂತೆ ಬಾಳಲೂ ಯೋಗ್ಯತೆಯಿರಬೇಕು. ನೀನು ರಾಣಿಯಂತಿರಬೇಕಾದರೆ ಇಲ್ಲಿರು. ಭಿಕಾರಿಯಂತಿರಬೇಕಾದರೆ ಹೊರಟುಹೋಗು' ಎಂದು ಹೇಳಿದಾಕ್ಷಣ ಜಿಂಕೆಯು ಸಿಂಹಕ್ಕೆ ಕೈಮುಗಿದು 'ಸಿಂಹರಾಯ, ನನಗೆ ಭಿಕಾರಿ ಜೀವನವೇ ಇಷ್ಟ' ಎಂದು ಹೇಳಿ ಛಂಗನೆ ಜಿಗಿಯುತ್ತಾ ಓಡಿಹೋಯಿತು.

-ಜಿ. ರಾಮಣ್ಣ ಆಲೆಟ್ಟಿ.

'ಕಾಗೆಗಳ ಸಭೆ'

ಕಾಡಿನಲಿ ಒಮ್ಮೆ
ಕಾಗೆಗಳು ಸೇರಿ
ಸಭೆಯನೊಂದು
ನಡೆಸಿದವು.

ತಮ್ಮಯ ಬಳಗಕೆ
ದೇವನು ಮಾಡಿದ
ಅನ್ಯಾಯ ಕುರಿತು
ಚರ್ಚಿಸಿದವು.

ದೇವನು ಕೊಟ್ಟನು
ಕಪ್ಪಿನ ಬಣ್ಣ
ಕರ್ಕಶ ಧ್ವನಿಯ
ರಾಗವನು.

ಸಾಕುಪ್ರಾಣಿಗಳ
ತೆರದಲಿ ಕಾಣದು
ಅಸಹ್ಯ ಪಡುವುದು
ಮನುಜಕುಲ.

ಸಭೆಯಲಿ ಗದ್ದಲ
ಮುಗಿದಾ ಕೂಡಲೇ
ಮಾತನಾಡಿತೊಂದು
ಮುದಿಕಾಗೆ.

ನಮ್ಮಯ ಬಣ್ಣವು
ಧ್ವನಿಯು ರಾಗವು
ದೇವನು ನೀಡಿದ
ಪ್ರೀ ರಕ್ಷೆ.

ಯಾರೂ ಬಾರರು
ನಮ್ಮಯ ತಂಟೆಗೆ
ಸಿಕ್ಕಿದ ನಮಗೆ
ಸ್ವಾತಂತ್ರ್ಯ.

ಹಿರಿಯರ ಶ್ರಾದ್ಧಕೆ
ಕೊಡುವರು ಅನ್ನ
ನಮ್ಮಯ ಮೂಲಕ
ಕೆಲ ಜನರು.

ಮುದಿಕಾಗೆಯ
ಮಾತನು ಕೇಳುತ
ಒಪ್ಪಿದವು ಎಲ್ಲ
ಕಾಗೆಗಳು.

ದೇವನು ಎಂದೂ
ಕರುಣಾಮಯನು
ಯಾರಿಗೂ ಮಾಡನು
ಅನ್ಯಾಯ.

ನಮ್ಮಯ ತಪ್ಪನು
ಕ್ಷಮಿಸು ದೇವಾ
ಎನ್ನುತ ಕಾಗೆಗಳು
ಬೇಡಿದವು.

—ಎಂ. ಆರ್. ಮಂಜುನಾಥ

ಸೆಂಟಿಸ್ಟ್ ಓಟೊ ಬಜ್ಜ
ಚಿತ್ರ: ಕೇಶವ ವಿಟ್ಲ

ಕಲಿಯೋಣ

ಬನ್ನಿರಿ ಮಕ್ಕಳೆ ಶಾಲೆಗೆ ಹೋಗುವ
ಪಾಠವ ನಾವು ಕಲಿಯೋಣ ।
ವಿದ್ಯಾ ಬುದ್ಧಿಯ ಕಲಿಯುತ ನಾವು
ಜಾಣರಾಗಿ ಬೆಳೆಯೋಣ ॥೧॥

ಶಾಲೆಯ ಸ್ವಚ್ಛತೆ ಮಾಡುತ ನಾವು
ಆರೋಗ್ಯ ಪಾಠವ ಕಲಿಯೋಣ ।
ಶಾಲೆಯ ತೋಟದಿ ದುಡಿಯುತ ನಾವು
ಕೃಷಿಯ ಪಾಠವ ತಿಳಿಯೋಣ ॥೨॥

ಕಾರ್ಯಾನುಭವದಿ ಕೆಲಸವ ಮಾಡುತ
ಗುಡಿ ಕೈಗಾರಿಕೆ ಕಲಿಯೋಣ ।
ಗುರುಗಳ ನೀತಿ ಕತೆಗಳ ಕೇಳಿ
ಸನ್ಮಾರ್ಗದಲಿ ನಡೆಯೋಣ ॥೩॥

ಶಾಲೆಯ ಕೆಲಸವ ಮಾಡುತ ನಾವು
ದುಡಿತದ ಬೆಲೆಯ ಗಳಿಸೋಣ ।
ದಿನದಿನ ಒಳ್ಳೆಯ ಕೆಲಸವ ಮಾಡುತ
ಸದ್ಗುಣರಾಗಿ ಬೆಳೆಯೋಣ ॥೪॥

—ಗೋ. ರಾ. ಶ್ರೀ. ಕಡಬ

ಇರುವೆ ಮತ್ತು ಜೇನುನೊಣ

ಇರುವೆಗಳೆಲ್ಲವು
ಒಂದೆಡೆ ಸೇರುತ
ಐಕ್ಯದಿ ಮಮತೆಯ ತೋರುವುವು

ಕಾಳದು ಬೆಲ್ಲವು
ಏನೇ ಸಿಕ್ಕಲಿ
ಹಂಚಿಯೆ ತಿನ್ನುತ ಬದುಕುವುವು।

ಜೇನಿನ ಹುಳುಗಳು
ಒಮ್ಮತದಿಂದಲಿ
ಕೂಡುತ ಗೂಡನು ಕಟ್ಟುವವು।

ಒಗರನು ಕಹಿಯನು
ಹುಳಿಯನು ಸೇರಿಸಿ
ಸಿಹಿಯನು ಲೋಕಕೆ ನೀಡುವುವು ।

ಸ್ನೇಹದಿ ಬಾಳುತ
ಜೇನನು ಮಾಡುತ
ಇದ್ದುದ ಹಂಚಿಯೆ ಬದುಕುವು ।

—ಅಡೂರು ನೇರಳಕಜೆ ಕಿಟ್ಟಣ್ಣ

ಕೈಗಾ ಸುತ್ತ...

(ಎರಡನೆ ಪುಟದಿಂದ)

ಉಪಾಯದಿಂದ ನಿವಾರಿಸಿಕೊಳ್ಳುತ್ತ ಅಣುಸ್ಥಾವರದ ತಳಪಾಯ ಹಾಕಲಿರುವ ಬೃಹತ್ ಹೊಂಡಗಳಲ್ಲಿ ಸುಮಾರು ಮುನ್ನೂರರಷ್ಟಿದ್ದ ಚಳವಳಿಗಾರರು ಧುಮುಕಿದಾಗ ಕೆಲಸಗಾರರೆಲ್ಲ ಕಂಗಾಲಾಗಿ ಓಡಿಬಿಟ್ಟರು. ಯಂತ್ರಗಳು ಸ್ತಬ್ಧವಾದವು. ಕುಸುಮಾಕ್ಷ ಶಿರಸಿಯಲ್ಲಿ ತಾವಾಡಿದ ಮಾತನ್ನು ಆ ಹೊತ್ತಿನ ಮಟ್ಟಿಗಾದರೂ ನಿಜಗೊಳಿಸಿ ತೋರಿಸಿದರು. ಕಾಯ್ದೆಯಂತೆ ಪೊಲೀಸರು ಅರೆಸ್ಟ್ ಮಾಡಲು ಬಂದಾಗ ಹೆಂಗಸರು ಗಂಡಸರ ಸುತ್ತ ಕೈ ಕೈ ಹೆಣೆದು ಸರಪಣಿ ನಿರ್ಮಿಸಿ ಕಾವಲಾಗಿ ನಿಂತರು. ಕೊನೆಗೂ ಅದನ್ನು ಭೇದಿಸಿ ಪೊಲೀಸರು ಸತ್ಯಾಗ್ರಹಿಗಳನ್ನೆಲ್ಲ ಬಂಧಿಸಿ ಬಸ್ಸು ತುಂಬಿ ಕಾರವಾರಕ್ಕೆ ತಂದು ಬಿಟ್ಟರು.

ಮಾರನೆದಿನ ಕೈಗಾ ಸುತ್ತ ನಿಷೇಧಾಜ್ಞೆ ಹೇರಿದ್ದರಿಂದ ಕಾರವಾರದಲ್ಲಿ ಚಳವಳಿ ಮೊದಲಾಯಿತು. ಕಾರವಾರದ ಕೋಡಿಭಾಗದಲ್ಲಿರುವ ಎನ್. ಪಿ. ಸಿ. ಆಫೀಸಿನೆದುರು ಶಾಂತಿಯುತ ಪಿಕೆಟಿಂಗ್ ನಡೆಸುತ್ತಿದ್ದ ಚಳವಳಿಗಾರರ ಮೇಲೆ ಅಪ್ರಚೋದಿತವಾಗಿ ಪೊಲೀಸರು ಲಾಠಿಚಾರ್ಜ್ ಮಾಡಿದಾಗ ಅನ್ನಪೂರ್ಣ ಎಂಬ ಮಹಿಳೆಗೆ ತೀವ್ರ ಪೆಟ್ಟಾಗಿ ಆಕೆ ಆಸ್ಪತ್ರೆ ಸೇರಬೇಕಾಯಿತು. ಮೂರನೇ ದಿನವೂ ಕೂಡ ಇಂಥ ಪ್ರಕಾರ ಪಿಕೆಟಿಂಗ್-ಮೆರವಣಿಗೆ-ಬಂಧನ-ಬಿಡುಗಡೆಗಳ ನಡುವೆ 13 ಜನ ಮೀನುಗಾರ ಮುಖಂಡರ ಮೇಲೆ 'ಹಲ್ಲೆ'ಯ ಖಟ್ಲೆ ಹಾಕಿ ಕೋರ್ಟಿಗೆ ಹಾಜರುಪಡಿಸಿ, ಅವರು ಜಾಮೀನು ನೀಡಲು ವಿರೋಧಿಸಿದ್ದರಿಂದ ಅವರನ್ನು ಫೆ. 14ರ ವರೆಗೆ ನ್ಯಾಯಾಂಗ ತಕ್ಷಡಿಗೆ ಒಪ್ಪಿಸಲಾಯಿತು. ಇದನ್ನು ವಿರೋಧಿಸಿ 200 ಜನ ತಹಸೀಲ್ದಾರರ ಕಛೇರಿಯೆದುರು ಧರಣಿ ಕೂತರು. ಚಳವಳಿಗೆ ಹೊಸ ತಿರುವು ಬಂತು. ಪೊಲೀಸ್ ದೌರ್ಜನ್ಯವನ್ನು ವಿರೋಧಿಸಿ ಫೆ. 2ರಂದು ಶಿರಸಿ-ಯಲ್ಲಾಪುರಗಳಲ್ಲಿ ಯಶಸ್ವಿ ಬಂದ್ ನಡೆಯಿತು.

ಫೆ. 5ರ ವರೆಗೂ ಮುಂದುವರಿದ ಚಳವಳಿ ಕೆಲವು ರಾಜಕೀಯಸ್ಥರ ಮಧ್ಯಸ್ಥಿಕೆಯಿಂದಾಗಿ ಬೇಷರತ್ತಾಗಿ ಬಂಧಿತರನ್ನು ಬಿಡುಗಡೆ ಮಾಡುವುದರೊಂದಿಗೆ ಮುಗಿಯಿತು.

ಇವಿಷ್ಟು ಈವರೆಗಿನ (ಮಾ. 9) ಕೈಗಾ ವಿರೋಧಿ ಚಳವಳಿಯ ವಿವಿಧ ಹಂತಗಳು. ಇವೆಲ್ಲ ಈಗಾಗಲೇ ಪತ್ರಿಕೆಗಳಲ್ಲಿ ವರದಿಯಾಗಿವೆ. ಆದರೆ ಒಬ್ಬ ಸಕ್ರಿಯ ಕಾರ್ಯಕರ್ತಳಾಗಿ ಚಳವಳಿಯಲ್ಲಿ ಪಾಲ್ಗೊಂಡು ಆಂದೋಲನದ ಕಷ್ಟ-ನಷ್ಟ, ಸೋಲು-ಗೆಲುವುಗಳನ್ನು ಹತ್ತಿರದಿಂದ ನೋಡಿ ಈ ಸಮೀಕ್ಷಾ ಲೇಖನ ಸಿದ್ಧಪಡಿಸಿದ್ದೇನೆ. ನಾವು ಸಾಗಬೇಕಾದ ದಾರಿ ದುರ್ಗಮ, ಗುರಿಯಂತೂ ತುಂಬಾ ದೂರ. ಆದರೆ ಜನ ತಂತ್ರೀಯ ರಾಷ್ಟ್ರದಲ್ಲಿ ಜನಮತಕ್ಕೆ ಬೆಲೆ ಬಂದೇ ಬರುತ್ತದೆ ಮತ್ತು ಬರಲೇ ಬೇಕು ಎಂಬ ಒಂದು ನಂಬಿಕೆ ನಮ್ಮನ್ನು ಮುನ್ನಡೆಸುತ್ತಿದೆ.

ಈ ಆರು ತಿಂಗಳ ಆಂದೋಲನದಿಂದಾಗಿ ಜಿಲ್ಲೆಯ ಜನರಲ್ಲಿ ಬಹಳಷ್ಟು ಜಾಗೃತಿಯುಂಟಾಗಿದೆ. ಬಹುತೇಕ ಜನರೆಲ್ಲ ಅಣುಸ್ಥಾವರ ವಿರೋಧಿಸುತ್ತಿದ್ದಾರೆ. ಜೊತೆಗೇ ಅಣುಶಕ್ತಿಪರ ವೇದಿಕೆಯೊಂದು ರಚಿತವಾಗಿ ಜನರನ್ನು ಕೆಲ ಮಟ್ಟಿಗೆ ಗೊಂದಲದಲ್ಲಿ ಕೆಡವಿದ್ದು ಸತ್ಯ. ಅಣು ವಿದ್ಯುತ್ ನಮಗೆ ಬೇಡವೇ ಬೇಡ ಎಂದು ನಾವಂತೂ ನಿರ್ಧಾರ ಮಾಡಿಯಾಗಿದೆ. ಇದರ ನಿರ್ಮಾಣವನ್ನು ನಿಲ್ಲಿಸುವಲ್ಲಿ ನಮ್ಮ ದಾರಿ ಯಾವುದು ಇದು ಮುಖ್ಯ ಪ್ರಶ್ನೆ. ಘೋಷಣೆ ಹಾಡು ಕೂಗುವುದರಿಂದ, ಮೆರವಣಿಗೆ-ಮನವಿ ಪಿಕೆಟಿಂಗ್‌ಗಳಿಂದ ಯಾವುದೇ ಕೆಲಸವನ್ನು ಶಾಶ್ವತವಾಗಿ ನಿಲ್ಲಿಸಬಹುದೇ? ಇವೆಲ್ಲವೂ ಒಂದೊಂದು ತಮಾಷೆಯಾಗಿ ಪ್ರಹಸನಗಳಾಗಿ ತಮ್ಮ ನೈಜ ಗಾಂಭೀರ್ಯ ಕಳೆದುಕೊಂಡು ಬಿಡುವುದಿಲ್ಲವೆ? ಎಂದು ನನಗೆ ಹಲವು ಬಾರಿ ಅನಿಸಿದ್ದಿದೆ. ಆದರೆ ಮಾರ್ಗ ಸರಿಯಿಲ್ಲವಾದರೆ ಅಹಿಂಸಾತ್ಮಕ ಪ್ರತಿಭಟನೆಗೆ ಮತ್ತ್ಯಾವ ದಾರಿಯಿದೆ? ಅಂಥಾ ಮಹಾ ಬ್ರಿಟಿಷ್ ಸಾಮ್ರಾಜ್ಯವನ್ನೇ ಈ ಸತ್ಯಾಗ್ರಹ ಸೋಲಿಸಿದಾಗ ನಮ್ಮದೇ ಸರ್ಕಾರ ಸ್ಥಾಪಿಸಲಿರುವ ಸ್ಥಾವರ ನಿಲ್ಲಿಸಲು ಸಾಧ್ಯವಿಲ್ಲವೆ?...ಪ್ರಶ್ನೆಗೆ ಪ್ರಶ್ನೆಗಳೇ ಉತ್ತರವಾಗಿ ಸಿಗುತ್ತಿವೆ. ಏಪ್ರಿಲ್ ಕೊನೆಯ ವಾರದಿಂದ ಪ್ರಾರಂಭವಾಗಲಿರುವ ಚಳವಳಿಯ ಮುಂದಿನ ಹಂತ ತನ್ನ ನೈಜ ಗುರಿ ತಲುಪಬೇಕಾದರೆ ಜಿಲ್ಲೆಯ ಜನರಷ್ಟೇ ಅಲ್ಲ ರಾಜ್ಯದ, ದೇಶದ ಎಲ್ಲ ಪರಿಸರ ಪ್ರೇಮಿಗಳು-ಮಾನವ ಹಿತ ಚಿಂತಕರು-ಪ್ರಜಾಪ್ರಭುತ್ವದಲ್ಲಿ ನಂಬುಗೆಯಿರುವವರೂ ಕೈಗೂಡಿಸಬೇಕಾಗಿದೆ ಅಂದಾಗ ಮಾತ್ರ ಹೋರಾಟ ಸಾರ್ಥಕವಾಗುತ್ತದೆ.

ಬೇರೆಯೇ ಮಾತು

ಮರಳಿ

ನಿಲ್ಲಲಿ ನ್ಯಾಯಾಂಗದ ಅಪಮೌಲ್ಯ

"......ತಮ್ಮ ಅಕೃತ್ಯಗಳನ್ನು ಮುಚ್ಚಿಟ್ಟು ಸುಖಗಳಾಗಿ ಮೆರೆದಾಡಲು ರಾಜಕಾರಣಿಗಳಿಗೆ ನ್ಯಾಯಾಂಗ ತನಿಖೆ ಒಂದು ಸುಲಭದ ಸಾಧನವಾಗಿರುವಂತೆ ಕಾಣುತ್ತಿದೆ", ಎಂಬ ಮಾತನ್ನು ನಾನು 1987 ಏಪ್ರಿಲ್ 10ರ 'ಮುಂಗಾರು' ಸಂಪಾದಕೀಯದಲ್ಲಿ ಬರೆದಿದ್ದೆ. 1983ರಲ್ಲಿ ಕರ್ನಾಟಕದ ರಾಜಕಾರಣದಲ್ಲಿ ಬಹುವಾಗಿ ವಿಜೃಂಭಿಸಿದ "ಪೊಲಿ ಟೇಪ್ ಪ್ರಕರಣದ" ನ್ಯಾಯಾಂಗ ತನಿಖೆ ನಡೆಸಿದ ನ್ಯಾಯಮೂರ್ತಿ ದೇಸಾಯಿಯವರ ವರದಿಯ ಕುರಿತಾಗಿ ಅಂದು ನಾನು ಬರೆದಿದ್ದ ಸಂಪಾದಕೀಯದಲ್ಲಿ ಹೇಳಿದ ಮಾತಿದು. ಸ್ವತಂತ್ರ ಭಾರತದ ಇತಿಹಾಸದುದ್ದಕ್ಕೂ, ಸರಕಾರಿ ಅಕ್ರಮಗಳು ಅಥವಾ ದುಷ್ಕೃತ್ಯಗಳು, ಪೋಲೀಸರ ದೌರ್ಜನ್ಯಗಳು, ಕೋಮು ಗಲಭೆಗಳು ಹಾಗೂ ರಾಜಕೀಯ ಪ್ರಭುಗಳ ಭ್ರಷ್ಟಾಚಾರದ ಬಗ್ಗೆ ನಡೆದ ನೂರಾರು ನ್ಯಾಯಾಂಗ ತನಿಖೆಗಳಲ್ಲಿ ಸತ್ಯ[illegible]ವೆಯೂ ಆಗಿಲ್ಲ ಆದರೂ [illegible]ಯಾಂಗ ವರದಿಗಳಿಗೆ [illegible] ಪ್ರಭುತ್ವ ಬೆಲೆ [illegible] ಇದಕ್ಕೆ ನಿದರ್ಶನಗಳ ದೊಡ್ಡ ಪಟ್ಟಿಯ[illegible] ತಯಾರಿಸಬಹುದು.

ಸತ್ಯಶೋ[illegible]ದನೆ ಮಾಡಲಾಗದ ಅಥವಾ ಮಾಡಿದರೂ [illegible]ದಕ್ಕೆ ಬೆಲೆ ಇಲ್ಲದಾಗುವ ಒಂದು ಅವಹೇಳನಕಾರಿಯಾದ ಸನ್ನಿವೇಶದಲ್ಲಿ ಸಿಕ್ಕಿರುವ ನ್ಯಾಯಾಂಗ ರಾಜಕೀಯ ಪ್ರಭುಗಳು ನೇಮಿಸುವ ನ್ಯಾಯಾಂಗ ತನಿಖೆಯ ಕೆಲಸವನ್ನು ನಿರಾಕರಿಸಬಾರದೇಕೆ?-ಎನ್ನುವ ಪ್ರಶ್ನೆಯನ್ನು [illegible]987 ಏಪ್ರಿಲ್ 10ರ ಸಂಪಾ[illegible] ಮುಂದಿಟ್ಟಿದ್ದೆ.

[illegible] ದಿನಗಳಿಂದ ದೇಶದ [illegible]ಲ್ಲ ನ್ಯಾಯಮೂರ್ತಿ ಥಕ್ಕರ್ ಆಯೋಗವು ಇಂದಿರಾಗಾಂಧಿಯವರ ಹತ್ಯೆಯ ಬಗ್ಗೆ ನಡೆಸಿದ ತನಿಖಾ ವರದಿಯ ಕುರಿತು ನಡೆದಿರುವ ವಿವಾದವು ಎರಡು ವರ್ಷಗಳ ಹಿಂದೆ ನಾನು ಆಡಿದ್ದ ಮಾತನ್ನು ಸಮರ್ಥಿಸುತ್ತಿದೆ. ಇಂದಿರಾ ಹತ್ಯೆಯ ತನಿಖಾ ವರದಿಯನ್ನು ಸಂಸತ್ತಿನ ಮುಂದಿಡಲು ನಿರಾಕರಿಸುತ್ತಿರುವ ಸರಕಾರಿ ನಿಲುವು ನ್ಯಾಯಾಂಗ ತನಿಖೆಯ ನಾಟಕೀಯ ರೂಪವನ್ನು ಎತ್ತಿತೋರಿಸುತ್ತದೆ.

ನ್ಯಾಯಾಂಗದ ತೀರ್ಪುಗಳಿಗೆ ಅಥವಾ ಅದರ ತನಿಖಾ ವರದಿಗಳಿಗೆ ಬೆಲೆ ಇಲ್ಲದಾಗುವ ಪರಿಸ್ಥಿತಿ ಪ್ರಜಾತಂತ್ರ ವ್ಯವಸ್ಥೆಗೆ ತೀರಾ ಅಪಾಯಕಾರಿ. ರಾಜಕೀಯ ಪ್ರಭುತ್ವಕ್ಕೆ ಅಧಿಕಾರ ಮದ ಅಂಟಿಕೊಳ್ಳದಂತೆ ಒಂದು ಅಂಕುಶವಾಗಿ ಕಾರ್ಯನಿರ್ವಹಿಸಬೇಕಾದ ನ್ಯಾಯಾಂಗವು ಹೀಗೆ ಅಸಹಾಯಕವಾಗುತ್ತಿರುವುದು ನಿಜಕ್ಕೂ ಆತಂಕಕಾರಿ. ಈ ಪ್ರವೃತ್ತಿ ನಮ್ಮ ದೇಶದಲ್ಲಿ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ತಾವು ಜನತಂತ್ರವಾದಿಗಳೆನ್ನುವ ವಿಚಾರವಂತ ಜನರಾಗಲೀ ನ್ಯಾಯ ನಿಷ್ಠುರರೆನ್ನುವ ನ್ಯಾಯಮೂರ್ತಿಗಳಾಗಲೀ ರಾಜಕೀಯ ಪ್ರಭುತ್ವವನ್ನು ಆವರಿಸಿರುವ ಈ ಪ್ರವೃತ್ತಿಯನ್ನು ಅದುಮಿ ಹಿಡಿವ ಕೆಲಸ ಮಾಡಿಲ್ಲ. ನ್ಯಾಯಾಂಗವು ತನ್ನ ತನಿಖಾ ವರದಿಗಳಲ್ಲಿ ಅಪರಾಧಿಗಳೆಂದು ಗುರುತಿಸಿದ ಅಧಿಕಾರಿಗಳಿಗೆ ಬಡ್ತಿ ನೀಡಿ ಪ್ರೋತ್ಸಾಹಿಸಿದಾಗ ಅದನ್ನು ಖಂಡಿಸುವ ನ್ಯಾಯನಿಷ್ಠುರತೆಯನ್ನು ನ್ಯಾಯಾಂಗ ತೋರಿಸಿಲ್ಲ.

ನಮ್ಮ ಓದುಗರಲ್ಲಿ ಅನೇಕರಿಗೆ ನೆನಪಿರುವಂತೆ 1981ರಲ್ಲಿ 100ಕ್ಕೂ ಹೆಚ್ಚು ಮಂದಿ ಮಕ್ಕಳನ್ನು ಬಲಿ ತೆಗೆದುಕೊಂಡ ಬೆಂಗಳೂರಿನ ಸರ್ಕಸ್ ದುರಂತಕ್ಕೆ ಕಾರಣರೆಂದು ಗುರುತಿಸಲಾದ ಪೊಲೀಸ್ ಅಧಿಕಾರಿಯೊಬ್ಬರಿಗೆ ಕರ್ನಾಟಕ ಸರಕಾರ 1983ರಲ್ಲಿ ಬಡ್ತಿ ನೀಡಿ ಗೌರವಿಸಿತ್ತು. ರಾಜಕೀಯ ಪ್ರಭುತ್ವದ ಈ ಅಕೃತ್ಯವನ್ನು ಖಂಡಿಸುವ ಆತ್ಮಬಲವನ್ನು ಪ್ರಜೆಗಳಾಗಲೀ-ನ್ಯಾಯಾಂಗವಾಗಲೀ ತೋರಿಸಲಿಲ್ಲ.

ಇತ್ತೀಚಿನ ವರ್ಷಗಳಲ್ಲಿ ಈ ದೇಶದ ಭಿವಂಡಿ, ಅಹಮ್ಮದಾಬಾದ್, ಮೀರತ್, ಮೊದಲಾದೆಡೆಗಳಲ್ಲಿ ನಡೆದ ಕೋಮು ಗಲಭೆಗಳ ಬಗ್ಗೆ ನಡೆದ ನ್ಯಾಯಾಂಗ ತನಿಖೆಯ ವರದಿಗಳನ್ನು ಸರಕಾರ ಪ್ರಕಟಿಸಿಯೂ ಇಲ್ಲ ಮತ್ತು ಈ ಗಲಭೆಗಳಲ್ಲಿ ಕರ್ತವ್ಯ ಲೋಪದ ಆರೋಪಕ್ಕೊಳಗಾದ ಪೊಲೀಸ್ ಅಧಿಕಾರಿಗಳನ್ನು ದಂಡಿಸಲೂ ಇಲ್ಲ. ಹೀಗೆ ಬೆಲೆ ಇಲ್ಲದಾಗುವ ನ್ಯಾಯಾಂಗ ತನಿಖೆಯ ಕೆಲಸಕ್ಕೆ ನ್ಯಾಯಾಂಗ ಯಾಕೆ ಒಪ್ಪಬೇಕು? ಎನ್ನುವ ಪ್ರಶ್ನೆ ಏಳುತ್ತದೆ.

ನಿರಂತರವಾಗಿ ನಡೆದುಕೊಂಡು ಬಂದಿರುವ ನ್ಯಾಯಾಂಗದ ಇಂತಹ ಅಪಮೌಲ್ಯದ ಬಗ್ಗೆ ದೇಶದ ನ್ಯಾಯಾಂಗ ಗಂಭೀರವಾಗಿ ಚಿಂತಿಸಿಲ್ಲವೆಂಬುದು ಸ್ಪಷ್ಟವಾಗುತ್ತದೆ. ನ್ಯಾಯಮೂರ್ತಿಗಳು ಈ ದಿಶೆಯಲ್ಲಿ ತುಸುವಾದರೂ ಚಿಂತನೆ ಮಾಡಿದ್ದರೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮಾತು ಮಾತಿಗೆ ನೇಮಿಸುತ್ತಿರುವ ನ್ಯಾಯಾಂಗ ತನಿಖೆಯನ್ನು ನ್ಯಾಯ ಮೂರ್ತಿಗಳಾದವರು ಒಪ್ಪಿಕೊಳ್ಳುತ್ತಿರಲಿಲ್ಲ; ರಾಜಕೀಯ ಪ್ರಭುಗಳು ನಡೆಸುತ್ತಿರುವ ನ್ಯಾಯಾಂಗ ತನಿಖೆಗಳು ನ್ಯಾಯಾಂಗಕ್ಕೆ ಎಷ್ಟು ಅವಹೇಳನಕಾರಿ ಯಾಗುತ್ತವೆಯೆಂಬುದಕ್ಕೆ ನಮ್ಮ ಓದುಗರಿಗೆ ತೀರಾ ಹತ್ತಿರದ್ದೆನ್ನಿಸುವ ನ್ಯಾಯಮೂರ್ತಿ ಪುಟ್ಟ ಸ್ವಾಮಿ ಆಯೋಗದ ಅಂತಿಮ ದುರ್ಗತಿಯನ್ನು ಪ್ರಸ್ತಾಪಿಸ ಬಯಸುತ್ತೇನೆ. ಆಗಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಮಗ ಭರತ್ ಹೆಗಡೆಯವರ ವಿರುದ್ಧದ ಎಂ.ಡಿ. ಸೀಟ್ ಪ್ರಕರಣದ ನ್ಯಾಯಾಂಗ ತನಿಖೆ ನಡೆಸುತ್ತಿದ್ದ ನ್ಯಾಯಮೂರ್ತಿ ಪುಟ್ಟ ಸ್ವಾಮಿಯವರೇ ಆರೋಪಗಳ ಸುಳಿಯಲ್ಲಿ ಸಿಕ್ಕಿ ಅರ್ಧದಲ್ಲೇ ರಾಜೀನಾಮೆ ಕೊಡಬೇಕಾಯಿತು.

ಮುಂಬಯಿ ಮಹಾನಗರದಲ್ಲಿ ಜೆ. ಜೆ. ಆಸ್ಪತ್ರೆಯಲ್ಲಿ ಹದಿನಾರು ಮಂದಿಯನ್ನು ಬಲಿ ತೆಗೆದುಕೊಂಡ ನಕಲಿ ಔಷಧಿಗಳ ದೊಡ್ಡ ಜಾಲದ ಕುಕೃತ್ಯಗಳನ್ನು ಬಯಲಿಗೆಳೆದ ನ್ಯಾಯಮೂರ್ತಿ ಲೆಂಟಿನ್ ಅವರ ವರದಿಯು ಏನಾಯಿತೆಂಬುದನ್ನು ಓದುಗರು ಇನ್ನೂ ಮರೆತಿರಲಿಕ್ಕೆ ಸಾಧ್ಯವಿಲ್ಲ. ಬಡ ರೋಗಿಗಳನ್ನು ವ್ಯವಸ್ಥಿತವಾಗಿ ಸಾಯಿಸಿದ ಈ ಅಮಾನುಷ ಜಾಲದಲ್ಲಿ ಶಾಮೀಲಾಗಿದ್ದ ಮಹಾರಾಷ್ಟ್ರದ ಶಾಸಕರೆನ್ನುವ ರಾಕ್ಷಸರು ಅಲ್ಲಿನ ವಿಧಾನ ಸಭೆಯಲ್ಲಿ ನ್ಯಾಯ ಮೂರ್ತಿ ಲೆಂಟಿನ್‌ರನ್ನು ಖಂಡಿಸುವ ನಿರ್ಣಯ ತಂದರು. ರಾಜಕೀಯ ಪ್ರಭುಗಳಿಂದ ನ್ಯಾಯಾಂಗಕ್ಕೆ ಇದಕ್ಕಿಂತ ಮಿಗಿಲಾದ ಅವಹೇಳನ ಸಾಧ್ಯವೇ?

ಇಷ್ಟೆಲ್ಲ ಆದರೂ ನ್ಯಾಯಾಂಗ ರಾಜಕೀಯ ಪ್ರಭುತ್ವಕ್ಕೆ ಬಹಳ ವಿಧೇಯವಾಗಿ ಉಳಿದು ಅವರ ಚಾಕರಿ ಮಾಡುತ್ತಿರುವುದು-ನ್ಯಾಯಾಂಗ ತನಿಖೆಗಳೆಂಬ ನಾಟಕದಲ್ಲಿ ಭಾಗಿಗಳಾಗಿರುವುದು ಆಶ್ಚರ್ಯದ ಸಂಗತಿ.

ಸರಕಾರಿ ನಿರ್ದೇಶಿತ ನ್ಯಾಯಾಂಗ ತನಿಖೆಗಳನ್ನು ನಡೆಸುವ ನ್ಯಾಯಮೂರ್ತಿಗಳು ವೈಯಕ್ತಿಕ ಕೇಡೋಪಧಿಗೀಡಾದ ಸನ್ನಿವೇಶಗಳೂ ಇವೆ. ಇದಕ್ಕೆ ಇತ್ತೀಚಿನ ನಿದರ್ಶನವಾಗಿ

> ನ್ಯಾಯಾಂಗ ತನಿಖೆಗಳೆಂದರೆ ರಾಜಕಾರಣಿಗಳ ಅಕೃತ್ಯಗಳನ್ನು ಮುಚ್ಚಿಟ್ಟು ಮೆರೆವ ಸುಲಭ ಸಾಧನವೆ? ನ್ಯಾಯಾಂಗದ ತನಿಖಾ ವರದಿಗಳಿಗೆ ಬೆಲೆ ಇಲ್ಲದಾಗುವ ಪರಿಸ್ಥಿತಿ ಪ್ರಜಾತಂತ್ರಕ್ಕೆ ಮಾರಕ ಅಲ್ಲವೆ? ಇದನ್ನು ಖಂಡಿಸುವ ನ್ಯಾಯ ನಿಷ್ಠುರತೆಯನ್ನೇಕೆ ನ್ಯಾಯಾಂಗ ತೋರಿಲ್ಲ. ?

1987ರ ಏಪ್ರಿಲ್‌ನಲ್ಲಿ ಕೇಂದ್ರ ಸರಕಾರ ಫೇರ್-ಫ್ಯಾಕ್ಸ್ ಪ್ರಕರಣದ ತನಿಖೆಗೆ ನೇಮಿಸಿದ್ದ ಥಕ್ಕರ್-ನಟರಾಜನ್ ಆಯೋಗವನ್ನಿಲ್ಲಿ ಪ್ರಸ್ತಾಪಿಸಬಹುದು. ಸುಪ್ರೀಂ ಕೋರ್ಟಿನ ಈ ಇಬ್ಬರು ನ್ಯಾಯಮೂರ್ತಿಗಳು ಸರಕಾರದ ಮಾನ ಉಳಿಸುವ ಒಂದು ಮೇಲಂಗಿಯನ್ನು ಹೆಣೆದರೆಂಬ ಆರೋಪ ದೇಶದ ಸಂಸತ್ತಿನವರೆಗೇ ಬಂತು. 'ಮುಂಗಾರು' ಸಹಿತ ದೇಶದ ಅನೇಕ ಪತ್ರಿಕೆಗಳು ಈ ಇಬ್ಬರು ನ್ಯಾಯಮೂರ್ತಿಗಳ ಪ್ರಾಮಾಣಿಕತೆಯನ್ನೂ ಪ್ರಶ್ನಿಸಿವೆ. ವರ್ಗ ಮಧ್ಯದಲ್ಲಿ ನ್ಯಾಯಾಂಗದ ಕೊಳೆ ತೊಳೆವ ಕೆಲಸ ನಡೆದರೂ ನ್ಯಾಯಮೂರ್ತಿ ಥಕ್ಕರ್ ಅವರು ಈಗಲೂ ಸರಕಾರಿ ನೇಮಿತ ಹುದ್ದೆಯೊಂದನ್ನು ಅಲಂಕರಿಸಿದ್ದಾರೆ.

ಈಗ ದೇಶದ ಸಂಸತ್ತನ್ನು ಗೊಂದಲಮಯವಾಗಿ ಮಾಡಿರುವ ಇಂದಿರಾ ಹತ್ಯೆಯ ತನಿಖಾ ವರದಿಯನ್ನು ತಯಾರಿಸಿದವರೂ ಇದೇ ಥಕ್ಕರ್. ಇಂದಿರಾ ಹತ್ಯೆಯ ಒಳ-ತಳವನ್ನು ಕೆದಕಿ ಹೇಳಿ ಅದರಲ್ಲಿ ನಡೆದಿರಬಹುದಾದ ಸಂಚಿನ ಎಳೆಗಳನ್ನು ನ್ಯಾಯಮೂರ್ತಿ ಥಕ್ಕರ್ ಗುರುತಿಸಿರುವರೆಂದು ಕೆಲವು ಪತ್ರಿಕೆಗಳಲ್ಲಿ ವರದಿಯಾಗಿದೆ. ಸರಕಾರ ನಡೆಸುತ್ತಿರುವ ಮಂದಿಗೆ ಕಿರಿ-ಕಿರಿ ಉಂಟುಮಾಡಬಹುದಾದ ಈ ಥಕ್ಕರ್ ವರದಿಯನ್ನು ಪ್ರಕಟಿಸಲು ಸರಕಾರವೀಗ ನಿರಾಕರಿಸುತ್ತಿದೆ. ಸರಕಾರದ ಈ ನಿರಾಕರಣೆಯಲ್ಲಿ ವಿಶೇಷವಾದುದೇನೂ ಇಲ್ಲ. ಈ ದೇಶದಲ್ಲಿ ಮಾಮೂಲಿಯಾಗಿ ನಡೆದುಕೊಂಡು ಬಂದ ಸಂಗತಿಯಿದು.

ಹಿಂದೆ ಅನೇಕ ಸಂದರ್ಭಗಳಲ್ಲಿ ದೇಶದ ಸರಕಾರ ತನಗೆ ಅನುಕೂಲವಲ್ಲದ ನ್ಯಾಯಾಂಗ ತನಿಖಾ ವರದಿಗಳನ್ನು ಇತಿಹಾಸದ ಕಸದ ಬುಟ್ಟಿಗೆ ಎಸೆದದ್ದಿದೆ. ಇಂದಿರಾ ಹತ್ಯೆಯ ನಂತರ ಹೊಸದಿಲ್ಲಿಯಲ್ಲಿ ಉನ್ಮತ್ತ ಜನರು ನಿರಪರಾಧಿ ಸಿಕ್ಖ್ ಸಮೂಹದ ಹತ್ಯೆ ಮಾಡಿದ ದುರ್ಘಟನೆಯ ನ್ಯಾಯಾಂಗ ತನಿಖಾ ವರದಿಯನ್ನೂ ಸರಕಾರ ಹೀಗೆ ಮುಚ್ಚಿ ಇಟ್ಟಿತ್ತು. ಆಗ ವಿರೋಧ ಪಕ್ಷಗಳು ಮಾಮೂಲಿಯಾದ ಟೀಕೆಯಲ್ಲೇ ತಮ್ಮ ಕೆಲಸ ಮುಗಿಸಿದವು. ಸಿಖ್ಖರ ಸಮೂಹ ಹತ್ಯೆಗೆ ಕಾರಣರಾದ ದುಷ್ಕೃತ್ಯರನ್ನು ಗುರುತಿಸಿ ದಂಡಿಸಬೇಕೆನ್ನುವ ಪಟ್ಟು ಹಿಡಿಯಲಿಲ್ಲ.

ವಿರೋಧ ಪಕ್ಷದ ಸಂಸದೀಯರು ಈಗ ಇಂದಿರಾ ಹತ್ಯೆಯ ನ್ಯಾಯಾಂಗ ತನಿಖೆಯ ಥಕ್ಕರ್ ವರದಿಯನ್ನು ಪ್ರಕಟಿಸಬೇಕೆಂದು ಪಟ್ಟು ಹಿಡಿದಿದ್ದಾರೆ. ಜನತಂತ್ರದ ಮೌಲ್ಯಗಳನ್ನು ಎತ್ತಿಹಿಡಿವ ಕರ್ತವ್ಯವನ್ನು ಈ ವಿರೋಧಿ ಸಂಸದೀಯರು ಪ್ರಾಮಾಣಿಕವಾಗಿ ನಿರ್ವಹಿಸುವುದಾದರೆ ಅವರು ಈಗ ಹಿಡಿದಿರುವ ಪಟ್ಟು ಎಲ್ಲ ನ್ಯಾಯಾಂಗ ವರದಿಗಳಿಗೂ ಅನ್ವಯವಾಗಬೇಕು. ನ್ಯಾಯಾಂಗ ತನಿಖಾ ವರದಿಗಳ ಪ್ರಕಟಣೆ ಮತ್ತು ಅವುಗಳ ಮೇಲಿನ ಕ್ರಮಕ್ಕೆ ಪಟ್ಟು ಹಿಡಿಯುವಾಗ ವಿರೋಧಿ ಸಂಸದೀಯರು ಆಯ್ಕೆ ಮಾಡಹೊರಟಾಗ ಅವರ ಪ್ರಾಮಾಣಿಕತೆ ಪ್ರಶ್ನಾರ್ಹವಾಗುತ್ತದೆ.

ಅದೇನೇ ಇರಲಿ, ಈಗ ವಿರೋಧಿ ಸಂಸದೀಯರು ಥಕ್ಕರ್ ಆಯೋಗದ ವರದಿಯ ಪ್ರಕಟಣೆಗೆ ಪಟ್ಟು ಹಿಡಿದಿರುವುದು ಸ್ವಾಗತಾರ್ಹ. ದೇಶದ ಎಲ್ಲ ಆಗುಹೋಗುಗಳ ಮೇಲೂ ಪೂರ್ಣ ಅರಿವಿನ ಗಮನ ಇಡಬೇಕಾದ ಸಾರ್ವಭೌಮಾಧಿಕಾರ ಸಂಸದೀಯರಿಗಿದೆ. ಸಂಸದೀಯರ ಈ ಅಧಿಕಾರ ಮತ್ತು ಕರ್ತವ್ಯ ನಿರ್ವಹಣೆಗೆ ಮಾಹಿತಿ ಮತ್ತು ಅವಕಾಶವನ್ನು ನಿರಾಕರಿಸುವ ಹಕ್ಕು ಸರಕಾರಕ್ಕಿಲ್ಲ. ದೇಶದ ರಕ್ಷಣೆಗೆ ಅಪಾಯಕಾರಿಯಾಗಬಲ್ಲ ಮಾಹಿತಿಯನ್ನು ಮಾತ್ರ ತಡೆಹಿಡಿವ ಅಧಿಕಾರ ಸರಕಾರಕ್ಕಿದೆ. ಇಂದಿರಾ ಹತ್ಯೆಯ ತನಿಖೆ ನಡೆಸಿದ ಥಕ್ಕರ್ ಆಯೋಗದ ವರದಿ ದೇಶದ ರಕ್ಷಣೆಗೆ ಸಂಬಂಧಿಸಿದ್ದಲ್ಲ. ಅಧಿಕಾರ ಸ್ಥಾನಗಳಲ್ಲಿರುವ ಮಂದಿ ಮತ್ತು ಅಧಿಕಾರ ಗದ್ದುಗೆಗೇರಬಯಸುವ ಜನ ಸೇರಿ ಎಂಥೆಂತಹ ಅಪಾಯಕಾರಿ ಸಂಚುಗಳನ್ನು ನಡೆಸಬಲ್ಲರೆಂಬುದರ ಗುಟ್ಟು ಥಕ್ಕರ್ ವರದಿಯಲ್ಲಿರಬಹುದು. ಈ ದೃಷ್ಟಿಯಿಂದ ಅದರ ಪ್ರಕಟಣೆ ತೀರಾ ಅನಿವಾರ್ಯವಾಗುತ್ತದೆ.

ಅಧಿಕಾರಸ್ಥ ಜನರ ಅಕೃತ್ಯಗಳನ್ನು ಮುಚ್ಚಿಡುವುದು ಒಂದು ಮಾಮೂಲಿ ಸಂಗತಿಯೆಂದು ಭಾವಿಸಬಾರದು. ಅಕೃತ್ಯಗಳನ್ನು ಮುಚ್ಚಿಡುವ ಪ್ರವೃತ್ತಿ ಅಂತಿಮವಾಗಿ ಜನ ತಂತ್ರ ವ್ಯವಸ್ಥೆಯನ್ನೇ ಕೆಡಿಸಬಹುದು.

ರಾಜ್ಯ ವ್ಯವಸ್ಥೆಯಲ್ಲಿ ಅಧಿಕಾರಸ್ಥಾನ ತೀರಾ ಮೋಹಕವಾದುದು. ಅಧಿಕಾರಕ್ಕೆ ಬರುವ ವ್ಯಕ್ತಿ ಎಷ್ಟೇ ಸಜ್ಜನನಾದರೂ ಅಧಿಕಾರದ ಮತ್ತಿನಲ್ಲಿ ಮೈಮರೆವ ಅಪಾಯವಿದೆ. ಇಂತಹ ಮೈಮರೆವು ಆಗದಂತೆ ಎಚ್ಚರಿಸುವುದಕ್ಕಾಗಿಯೇ ಸಾರ್ವಭೌಮಾಧಿಕಾರದ ಸಂಸತ್ತು, ಸ್ವತಂತ್ರ ನ್ಯಾಯಾಂಗ ಹಾಗೂ ಪ್ರಜ್ಞಾವಂತ ಪತ್ರಿಕಾ ರಂಗವನ್ನು ಗುರುತಿಸಿರುವುದು.

ಬ್ರಿಟಿಷ್ ಸಂಪ್ರದಾಯದ ಈ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಂಗೀಕರಿಸಿದ ಭಾರತದಲ್ಲಿ ಸಂಸದೀಯ ವ್ಯವಸ್ಥೆ ತನ್ನ ಅಂತಃಸತ್ವವನ್ನು ಕಳಕೊಳ್ಳುತ್ತಲೇ ಬಂದಿದೆ. ಅಧಿಕಾರಸ್ಥರ ಆಣತಿಗೆ ಮಣಿವ ದುರ್ಬಲ ಜನ ಕೂಟವಾಗಿ ದೇಶದ ಸಂಸತ್ತು ಮಾರ್ಪಟ್ಟಿದೆ. ಆಳುವ ಪಕ್ಷವೊಂದರಲ್ಲಿ ಬುದ್ಧಿಬಲವಿಲ್ಲದ ಹೌದಪ್ಪಗಳ ಸಂಖ್ಯೆ ಹೆಚ್ಚಿದಾಗ ಅದನ್ನು ಜನ ತಂತ್ರದ ಮೊದಲ ಅಪಾಯವೆಂದು ಪರಿಗಣಿಸಬೇಕಾಗಿದೆ. ನಮ್ಮ ದೇಶದಲ್ಲಿ ಅದೀಗ ಪೂರ್ಣವಾಗಿ ಆಗಿದೆ. ಸರಕಾರಕ್ಕೆ ಸಾರ್ವಜನಿಕ ಹಿತದ ಅಂಕುಶ ಹಾಕಬೇಕಾದ ನ್ಯಾಯಾಂಗವೂ ತನ್ನ ಸ್ವಾತಂತ್ರ್ಯವನ್ನು ಕಳಕೊಂಡರೆ ನಿರಂಕುಶಾಧಿಕಾರಕ್ಕೆ ದಾರಿ ತೆರೆಯುತ್ತದೆ.

ಇಂತಹ ಒಂದು ಅಪಾಯಕಾರಿಯಾದ ಕಾಲ ಘಟ್ಟದಲ್ಲಿ ಭಾರತದ ಜನ ತಂತ್ರ ವ್ಯವಸ್ಥೆ ಈಗಿದೆ. ಈಗಿರುವ ಗುಣ ಮಟ್ಟದಲ್ಲೇ ನಮ್ಮ ಶಾಸನ ಸಭೆಗಳು ಮತ್ತು ದೇಶದ ಸಂಸತ್ತನ್ನು ಉಳಿಸಿಕೊಂಡು ಅನುದಿನವೂ ನಡೆಯುತ್ತಿರುವ ನ್ಯಾಯಾಂಗದ ಅಪಮೌಲ್ಯದ ಬಗ್ಗೆ ನಿಸ್ಸೀಮ ಔದಾಸೀನ್ಯ ವಹಿಸಿದರೆ ಈ ದೇಶದಲ್ಲಿ ಜನತಂತ್ರ ಹೆಚ್ಚು ಕಾಲ ಬದುಕುವುದೆಂದು ಯಾರೂ ಭಾವಿಸಬಾರದು.

ಈ ದೇಶದ ಬಡ ಜನ ಬಹಳ ಬೆಲೆತೆತ್ತು ಉಳಿಸಿಕೊಂಡು ಬಂದಿರುವ ಜನತಂತ್ರ ಉಳಿಯಬೇಕಾದರೆ ನ್ಯಾಯಾಂಗದ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಬೇಕು. ಎಲ್ಲ ಹಂತಗಳಲ್ಲಿಯೂ ನ್ಯಾಯಾಧೀಶರುಗಳ ನೇಮಕಕ್ಕೆ ಸಾರ್ವಭೌಮಾಧಿಕಾರವುಳ್ಳ ವ್ಯವಸ್ಥೆಯನ್ನು ಮಾಡಬೇಕು. ನ್ಯಾಯಾಧೀಶರ ನೇಮಕಾಧಿಕಾರವನ್ನು ಈಗಿರುವಂತೆ ರಾಜಕೀಯ ಪ್ರಭುಗಳ ಕೈಯಲ್ಲೆ ಉಳಿಸಿದರೆ ನ್ಯಾಯಾಂಗವು ಅಧಿಕಾರಕ್ಕೆ ಅಂಕುಶವಾಗಿ ಎಂದಿಗೂ ಕೆಲಸ ಮಾಡಲಾರದು. ನ್ಯಾಯಾಲಯಗಳು ಅಧಿಕಾರಸ್ಥ ಜನರ ಹಂಗಿನ ಅರಮನೆಗಳಾಗಿ ತಗಿಪಾಟಲಿಗೆ ಈಡಾಗುತ್ತವೆ.

ನಮಗೆ ನಿಜಕ್ಕೂ ಜನ ತಂತ್ರ ವ್ಯವಸ್ಥೆ ಬೇಕೆಂದಾದರೆ ಈ ದೇಶದ ಜನ ಮೊದಲು ನ್ಯಾಯಾಂಗವನ್ನು ರಾಜಕೀಯ ಪ್ರಭುಗಳ ಅಂಕೆಯಿಂದ ಬಿಡಿಸಬೇಕು. ಎಲ್ಲ ನ್ಯಾಯಾಂಗ ತನಿಖೆಗಳೂ ಬಹಿರಂಗವಾಗಿ ನಡೆಯುವಂತಹ ನಿಯಮಗಳನ್ನು ರೂಪಿಸಬೇಕು. ನಡೆದ ಎಲ್ಲ ನ್ಯಾಯಾಂಗ ತನಿಖೆಗಳನ್ನು ಪ್ರಕಟಿಸಿ ಅವುಗಳಿಗೆ ಬೆಲೆ ಬರಿಸುವ ವಿಚಾರವು ಮಾಡಬೇಕು. ಇದಕ್ಕಾಗಿ ಮತ್ತೂ ಇನ್ನೂ ಅನೇಕ ಕಾರಣಗಳಿಗಾಗಿ ದೇಶದ ರಾಜ್ಯಾಂಗವನ್ನು ಪುನರೂಪಿಸಬೇಕು.

ರಾಜ್ಯಾಂಗವು ಸಾಂಪ್ರದಾಯಿಕ ಪೂಜೆಗೆ ಬೇಕಾದ ಪವಿತ್ರ ಗ್ರಂಥವಾಗಿ ಉಳಿಯಬಾರದು. ಪರಿವರ್ತನ ಶೀಲವಾದ ಒಂದು ಸಮಾಜದ ಪ್ರಚಲಿತ ಸ್ಥಿತಿಗೆ ಪ್ರಸ್ತುತವೆನ್ನಿಸುವ ಶಾಸನವಾಗಬೇಕು. ಈ ಅಗತ್ಯವನ್ನು ನಾವು ಒಪ್ಪಿಕೊಂಡು ಕಾರ್ಯೋನ್ಮುಖರಾದರೆ ಮಾತ್ರ ಜನತಂತ್ರದ ಜೀವ ಉಳಿದೀತು. ಥಕ್ಕರ್ ಆಯೋಗದ ವರದಿಯ ಮೇಲಿನ ವಿವಾದದಿಂದ ದೇಶದ ಪ್ರಜಾವರ್ಗ ಕಲಿಯಬೇಕಾದ ಪಾಠವಿದು.